ಕೈ-ಕಾಲು ಆಡ್ತಾನೇ ಇಲ್ಲ' ಅಂತ ಉಸಿರಾಡಲೂ ಪುರುಸೊತ್ತಿಲ್ಲದಂತೆ ಬಡ ಬಡ ಉಸುರಿ ಗೋಳೋ ಅಂತ ಅತ್ತಳು. ಅವಳ ಅಳುವಿನ ಸದ್ದು ಮಗರಾಯನ ಕಿವಿ ತಲುಪಿತು, 'ಹೇ, ಇದು ನನ್ನ ಅಮ್ಮ ಅಲ್ವಾ?' ಅಂದುಕೊಂಡ ಜನ್ನು ಕೈಲ್ಲಿದ್ದ ಹಣ್ಣು, ತಟ್ಟೆ ಎಲ್ಲಾ ಬಿಟ್ಟು ಹೊರಗೋಡಿ ಬಂದ, ಅವನ ಮುಖದಲ್ಲೀಗ ಸೂರ್ಯನ ಪ್ರಕಾಶದಂತೆ ನಗು. ಅಮ್ಮನ ಬಳಿ ಅಂವ ಹೋದನೋ, ಅಮ್ಮ ಅವನನ್ನು ಎಳಕೊಂಡಳೋ ಗೊತ್ತಿಲ್ಲ ಒಟ್ಟು ಅಮ್ಮನ ಅಪ್ಪುಗೆಯಲ್ಲಿದ್ದ! ಭಾಗೀರಥಿ ಅವನನ್ನು ಅಪ್ಪಿ ಮುದ್ದಾಡಿದ್ದೇ ಮುದ್ದಾಡಿದ್ದು! ಅವಳ ಉದ್ವೇಗ ಇಳಿಯುವವರೆಗೆ ಕಾದಿದ್ದ ಪೊರ್ಬುಗಳು 'ಭಾಗೀರಥಿ, ಎಲ್ಲಿ ಹೋಗ್ತಾನೆ ಇಷ್ಟು ಸಣ್ಣ ಹುಡುಗ, ಈ ಥರಾ ಗಾಬ್ರಿ ಆದ್ರೆ ಹೇಗಮ್ಮಾ? ನಮ್ಮನೆಗೆ ಬಂದಿದ್ದ, ಸ್ವಲ್ಪ ಹೊತ್ತಲ್ಲೇ ತಂದು ಬಿಡ್ತಾ ಇದ್ದೆ!' ಅಂದರು. ಅಮ್ಮ-ಮಗನನ್ನ ನೋಡಿ ಅವರಿಗೂ ಕಣ್ಣು ತುಂಬಿ ಬಂದಿತ್ತು. ಜನ್ನುವಿಗೋ ಹೆದರಿಕೆಯೋ ಹೆದರಿಕೆ, ಅಮ್ಮ ಈ ನಮೂನೆ ಅತ್ತದ್ದು ನೋಡಿ, ಅಜ್ಜ ಬೇರೆ ಅಳೋ ಥರಾ ಇದ್ದಾರೆ. ಬಂದಾಗಿಂದ ಈ ಲವೀನಕ್ಕ ಬೇರೆ ಒಳಗೆ ಅಳ್ತಾ ಕೂತಿದ್ದಾಳೆ, ಏನಾಗುತ್ತಿದೆಯೆಂದೇ ಅರಿಯದಾದ ಪುಟ್ಟ ಜನ್ನು. ಮರುಜೀವ ಪಡೆದಂತಾದ ಭಾಗೀರಥಿ ಅವನನ್ನೆತ್ತಿ ಹೊರಡಲನುವಾಗುತ್ತಾ, 'ಪೊರ್ಬುಗಳೇ, ಬರ್ತೇನೆ, ತಂಟೆ ಪೋಕರಿ ಇವ, ನಿಮಗೆ ಉಪದ್ರ ಕೊಟ್ನಾ ಹೇಗೆ?' ಎಂದು ಕೇಳುವಷ್ಟರಲ್ಲಿ ಬಾಗಿಲ ಚೌಕಟ್ಟಿನ ಬಳಿ ನಿಂತ ಲವೀನಾ ಕಣ್ಣಿಗೆ ಬಿದ್ದಳು. ಅವಳೋ ಅಮ್ಮ-ಮಗನ ಮುದ್ದಾಟವನ್ನು ನೋಡುತ್ತಾ ನಿಂತವಳು. ಅವಳ ಅಳೂ ತಹಬಂದಿಗೆ ಬಂದಿತ್ತು. ಭಾಗೀರಥಿಯ ದೃಷ್ಟಿ ಲವೀನಾ ಮೇಲೆ ಬಿದ್ದೊಡನೆ ಅವಳ ಊದಿಕೊಂಡ ಮುಖ ನೋಡಿ ಮನ ಚುರ್ ಎಂದಿತು. 'ಲವೀನಾ, ನಿಂಗೆ ಇವನನ್ನು ನೋಡಬೇಕೆನಿಸಿದಾಗೆಲ್ಲಾ ಬಾ ಮನೆಗೆ.ಮುಗಿದು ಹೋದದ್ದನ್ನು ಬಿಟ್ಟು ಮುಂದೆ ನಡೆಯಬೇಕೇ ಹುಡುಗಿ, ಕೊರಗೋದಲ್ಲ. ನಿಂಗೆ ಹೇಗೆ ಅನಿಸುತ್ತೆ ಅನ್ನೋದು ಇವತ್ತು ನಂಗೆ ಸರಿಯಾಗಿಯೇ ತಿಳಿಯಿತು ಮಾರಾಯ್ತಿ, ನಾನು ಅತ್ತೆಗೆ ಹೇಳ್ತೇನೆ, ಮನೆಗೆ ಆವಾಗಾವಗ ಬರ್ತಾ ಇರು. ಜನ್ನು ಕೂಡಾ ನಿನ್ನ ಮಗನೇ ಅರ್ಥವಾಯ್ತಾ? ಕಂದಮ್ಮಾ, ಅಕ್ಕಂಗೆ ಟಾಟಾ ಹೇಳು' ಅಂದವಳೇ ಜನ್ನುವಿನಿಂದ ಅವಳಿಗೆ ಕೈಯಾಡಿಸಿ ಅಲ್ಲಿಂದ ಹೊರಟೇಬಿಟ್ಟಳು.

ಜನ್ನು ಅವರಮ್ಮನನ್ನು ಮೊದಲ ಬಾರಿಗೆ ಧಿಕ್ಕರಿಸಿ ಅಮ್ಮನ ಸೊಂಟದಿಂದ ಇಳಿದು ಲವೀನಕ್ಕ ಹತ್ತಿರ ಓಡಿ ಬಂದು ಅವಳ ಕೈ ಹಿಡಿದೆಳೆದು ಮುಖದ ಹತ್ತಿರ ಮುಖವಿಟ್ಟು ಅವಳಿಗಷ್ಟೇ ಕೇಳುವಂತೆ ಉಸುರಿದ 'ಲವೀನಕ್ಕ, ನಿಮ್ಮನೇಲಿ ನಾಯಿ, ಬೆಕ್ಕು, ಬಾಬು ಯಾವುದೂ ಇಲ್ಲ ಅಲ್ವಾ ಆಟ ಆಡ್ಲಿಕ್ಕೆ? ನಾಳೆ ಕೆರೆ ದಂಡೆಗೆ ಬಾ ಆಯ್ತಾ, ಅಲ್ಲಿ ನಾನು ತಿಮ್ಮು ಇರ್ತೇವೆ,



ನಿಂಗೆ ಪೇರಳೆ ಹಣ್ಣು, ಕುಂಟಾಳ ಹಣ್ಣು, ತೂರಿ ಮುಳ್ಳು ಮತ್ತೆ ತುಂಬಾ ಗೇರುಬೀಜ ಎಲ್ಲಾ ಕೊಡ್ತೇವೆ, ನಮ್ಮೊಟ್ಟಿಗೆ ಆಟ ಆಡು ಆಯ್ತಾ' ಅಂದವನೇ ಅವಳ ಕೆನ್ನೆಗೆ ಮುತ್ತೊಂದನ್ನು ಕೊಟ್ಟ, ಲವೀನಕ್ಕ ನಕ್ಕಳು, ಕಿತ್ತಳೆ, ಬಾದಾಮಿಗಿಂತ ಲವೀನಕ್ಕನ ನಗುವೇ ಹೆಚ್ಚು ಇಷ್ಟ ಅನಿಸಿತು ಜನ್ನುವಿಗೆ. ಅಜ್ಜನನ್ನ ನೋಡಿ ನಕ್ಕು ಅಮ್ಮನ ಕಡೆ ಓಡಿದ. ಅಮ್ಮ, ಅಜ್ಜ ಬೆರಗಾಗಿ ನೋಡುತ್ತಲೇ ಇದ್ದರು.

●